## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 795 |
| ಮಾನ್ಯ ಸದಸ್ಯರ ಹೆಸರು | ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲೆಲ್ಲಿ ಆಹಾರ ಸಂರಕ್ಷಣಾ ಮತ್ತು ಔಷಧ ಆಡಳಿತ ಇಲಾಖೆಯ ಪರೀಕ್ಷಾ ಕೇಂದ್ರಗಳಿವೆ; | ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ 04 ಔಷಧ ಪರೀಕ್ಷಾ ಪ್ರಯೋಗಾಲಯಗಳು ಮತ್ತು 04 ಆಹಾರ ಪರೀಕ್ಷಾ ಪ್ರಯೋಗಾಲಯಗಳು ಒಟ್ಟು 08 ಪರೀಕ್ಷಾ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.<br>ಔಷಧ ಆಡಳಿತ ವಿಭಾಗ:<br>1. ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು<br>2. ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳ್ಳಿ<br>3. ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಬಳ್ಳಾರಿ" -<br>4. ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಮೈಸೂರು ಪ್ರಯೋಗಾಲಯ,<br>ಆಹಾರ ಸುರಕ್ಷತಾ ವಿಭಾಗ :<br>1. ರಾಜ್ಯ ಆಹಾರ ಪ್ರಯೋಗಾಲಯ, ಬೆಂಗಳೂರು.<br>2. ವಿಭಾಗೀಯ ಆಹಾರ ಪ್ರಯೋಗಾಲಯ, ಮೈಸೂರು<br>3. ವಿಭಾಗೀಯ ಆಹಾರ ಪ್ರಯೋಗಾಲಯ, ಬೆಳಗಾವಿ<br>4. ವಿಭಾಗೀಯ ಆಹಾರ ಪ್ರಯೋಗಾಲಯ, ಕಲಬುರಗಿ |
| ಆ) | ರಾಜ್ಯದಲ್ಲಿ ಹೊಸದಾಗಿ ಎಲ್ಲೆಲ್ಲಿ ಪರೀಕ್ಷಾ ಕೇಂದ್ರಗಳನು ಪ್ರಾರಂಭಿಸುವ ಪ್ರಸ್ತಾವನೆಯಿದೆ. | ಔಷಧ ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಮೈಸೂರು ವಿಭಾಗದಲ್ಲಿ ಜೂನ್-2026 ರಲ್ಲಿ ಹೊಸದಾಗಿ ಔಷಧ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ.<br><br>ಆಹಾರ ಸುರಕ್ಷತಾ ವಿಭಾಗಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಮಂಗಳೂರು, ರಾಯಚೂರು, ಧಾರವಾಡ, ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರ ಪ್ರಯೋಗಾಲಯಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಡಿ |

| | | |
|---|---|---|
| | | ಕಾರ್ಯ ನಿರ್ವಹಿಸುತ್ತಿರುತ್ತವೆ.<br><br>ಔಷಧ ಮತ್ತು ಆಹಾರ ಪರೀಕ್ಷಾ ಕೇಂದ್ರಗಳು ಎಲ್ಲಾ ಕಂದಾಯ ವಿಭಾಗದಲ್ಲಿ ಒಂದರಂತೆ ಇರುತ್ತದೆ. |
| ಇ) | ಕರ್ನಾಟಕದ ಮಧ್ಯಭಾಗ ಮತ್ತು ಕರಾವಳಿ ಜಿಲ್ಲೆಗಳಿಗೆ ಅನುಕೂಲವಾಗುವಂತೆ "ಶಿವಮೊಗ್ಗ" ಕೇಂದ್ರವಾಗಿರಿಸಿಕೊಂಡು ಹೊಸ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ; | ಔಷಧ ಆಡಳಿತ ವಿಭಾಗದಿಂದ ರಾಜ್ಯದಲ್ಲಿ ಹೊಸದಾಗಿ ಔಷಧ ಪರೀಕ್ಷಾ ಪ್ರಯೋಗಾಲಯವನ್ನು ಸ್ಥಾಪಿಸಲು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳನ್ವಯ ಅನುಸರಿಸಬೇಕಾದ ಕಡ್ಡಾಯ ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಪರಿಶೀಲಿಸಿ, ಪ್ರಯೋಗಾಲಯವನ್ನು ಸ್ಥಾಪಿಸುವ ಕುರಿತು ಸಾಧಕ / ಬಾಧಕ ವರದಿಯನ್ನು ತುರ್ತಾಗಿ ಸಲ್ಲಿಸುವಂತೆ ಪ್ರಧಾನ ವೈಜ್ಞಾನಿಕ ಅಧಿಕಾರಿ, ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳ್ಳಿರವರಿಗೆ ಸೂಚಿಸಲಾಗಿದೆ. |
| ಈ) | "ಶಿವಮೊಗ್ಗ" ಜಿಲ್ಲಾ ಕೇಂದ್ರವಾಗಿರಿಸಿ "ಪರೀಕ್ಷಾ ಕೇಂದ್ರ" (ಪ್ರಯೋಗಾಲಯ) ಪ್ರಾರಂಭಿಸಿದಲ್ಲಿ ಸುತ್ತಲಿನ ಚಿಕ್ಕಮಗಳೂರು, ಉಡುಪಿ ಸೇರಿದಂತೆ ಇನ್ನಿತರ ಜಿಲ್ಲೆಗಳಿಗೆ ಅನುಕೂಲವಾಗುವುದು ಸರ್ಕಾರದ ಗಮನಕ್ಕಿದೆಯೇ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | |

ಸಂಖ್ಯೆ: HFW 107 SBV 2026

(ಯು.ಟಿ. ಖಾದರ್ ಫರೀದ್)
ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್
ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು